ಶ್ರೀ ಬಾಪೂಗೌಡ.—ವಿಲೇಜ್ ಅಕೌಂಟೆಂಟರನ್ನು ಪ್ರತಿವರ್ಷವೂ ನೇಮಕ ಮಾಡುತ್ತಾರೆ. ಹಾಗೆ ನೇಮಕ ಮಾಡಿದ ಕಾಲಕ್ಕೆ ವತನದಾರರನ್ನು ತೆಗೆದುಕೊಳ್ಳುವ ವಿಚಾರ ಇದೆಯೇ ಅಥವಾ ಮೆಟ್ರಿಕ್ಯುಲೇಟ್ ಅದ ಜನರನ್ನು ತೆಗೆದುಕೊಂಡು ಟ್ರೈನ್ಡ್ ಮಾಡುವ ವಿಚಾರ ಇದೆಯೇ ?

ಶ್ರೀ ಹೆಚ್. ವಿ. ಕೌಜಲಗಿ.—ವತನದಾರರು ಮತ್ತು ಹೆರಿಡಟರಿ ಆಫೀಸರ್ ಮನೆತನದಿಂದಲೂ ನಹ ತೆಗೆದುಕೊಳ್ಳುವ ವಿಚಾರ ಇದೆ. ಅವರಿಗೆ ಕೆಲವು ನವಲತ್ತುಗಳನ್ನು ಕೊಟ್ಟಿದ್ದೇವೆ. ಅವರಿಗೆ ವಯಸ್ಸಿನ ಪರಮಿತಿ 50 ವರ್ಷವಾಗಿದ್ದರೂ ಮೆಟ್ರಿಕ್ಯುಲೇಷನ್ ಫೇಲ್ ಆಗಿದ್ದರೂ ನಡೆಯುತ್ತದೆ.

ಶ್ರೀ ಎಂ. ಬಿ. ಬಣಕಾರ್.—ಅವರು ತಾಲ್ಲೂಕು ಬೋರ್ಡ್ ಚುನಾವಣೆಯಲ್ಲಿ ನಿಲ್ಲುವುದಕ್ಕೆ ಪರ್ಮಿಷನ್ ಕೇಳಿದ್ದಾರೆ. ಅದಕ್ಕೆ ಅವಕಾಶವನ್ನು ಕೊಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಈ ಪ್ರಶ್ನೆ ಇಲ್ಲಿ ಬರುವುದಿಲ್ಲ.

Fire Brigade Service Station at Moodibidri

24. Sri RATNAKUMAR KATTEMAR (Mudibidri).—

Will the Chief Minister be pleased to state.—

whether Government propose to set up a "Fire Brigade Service Station" at Moodibidri?

A—Sri VEERENDRA PATIL (Chief Minister).—

No.

ಶ್ರೀ ರತನ್‌ಕುಮಾರ್ ಕಟ್ಟೇಮಾರ್.—ಸ್ವಾಮಿ, ಮೂಡುಬಿದ್ರಿಗೆ ಒಂದು ಅಗ್ನಿಶಾಮಕ ದಳವನ್ನು ಕೇಳಿದ್ದೇವೆ. ತಮ್ಮ ಅಧಿಕಾರಾವಧಿಯಲ್ಲಿ ಅದರೂ ಇಂತಹ ಯಾವುದಾದರೂ ಕೆಲಸವನ್ನು ಮಾಡಿಕೊಡಬಹುದೇ ?

† ಶ್ರೀ ವೀರೇಂದ್ರ ಪಾಟೀಲ್.—ಅಗ್ನಿಶಾಮಕದಳವನ್ನು ಕೊಡಬೇಕಾಗಿದೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಇದಕ್ಕೆ ರೆಕರಿಂಗ್ ಮತ್ತು ನಾನ್ ರೆಕರಿಂಗ್ ಬಾಬುಗಳಲ್ಲಿ ಎಷ್ಟು ಖರ್ಚಾಗುತ್ತದೆ ಎನ್ನುವುದನ್ನು ತಿಳಿಯಬೇಕು. ಅಲ್ಲಿ ಮುನಿಸಿಪಾಲಿಟಿ ಇದೆಯೋ ಪಂಚಾಯಿತಿ ಇದೆಯೋ ಗೊತ್ತಿಲ್ಲ. ಫೈರ್ ಸರ್ವಿಸ್ ಸ್ಟೇಷನ್ಸ್ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಸಣ್ಣ ಸಣ್ಣ ಊರುಗಳಲ್ಲಿ, ಪಂಚಾಯಿತಿಗಳು ಇಡುವುದಕ್ಕಾಗುವುದಿಲ್ಲ ಏಕೆಂದರೆ ಬಹಳ ಹಣ ಖರ್ಚಾಗುತ್ತದೆ. ಎಲ್ಲೆ ಫೈರ್ ಸ್ಟೇಷನ್ ಬೇಕಾಗಿದೆಯೋ ಅಲ್ಲಿನ ಮುನಿಸಿಪಾಲಿಟಿಯವರು 50 ಪರ್ಸೆಂಟು ಕೊಡುವುದಕ್ಕೆ ಒಪ್ಪಿ ರೆಸಲ್ಯೂಷನ್ ಮಾಡಿ ಸರ್ಕಾರಕ್ಕೆ ಕಳುಹಿಸಿದರೆ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ನೋಡುತ್ತೇನೆ.

ಶ್ರೀ ಪಾಟಾಳ್ ನಾಗರಾಜ್.—ಎಷ್ಟು ಕೇಂದ್ರಗಳಲ್ಲಿ ಅಗ್ನಿಶಾಮಕದಳದ ಕೇಂದ್ರಗಳನ್ನು ತೆರೆದಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಪ್ರತ್ಯೇಕ ಪ್ರಶ್ನೆ ಹಾಕಿದರೆ ಇದೀ ಸ್ಟೇಟ್‌ನಲ್ಲಿ ಎಷ್ಟು ತೆರೆದಿದ್ದೇವೆ ಎನ್ನುವ ಉತ್ತರ ಕೊಡುತ್ತೇನೆ.

Sri KONDAJJI BASAPPA.—What is the estimated cost of fire brigade ?

Sri VEERENDRA PATIL.—About non-recurring and recurring expenditure for the fire station, there are two types of fire stations ; one

is A type and another is B type ; for A fire station, non-recurring expenditure is :

Cost of fire station building	...	Rs. 80,000
Staff quarters	...	Rs. 2,00,000
Static water tank	...	Rs. 5,000
Cost of equipment and appliances.		Rs. 1,80,000
		4,65,000

Recurring expenditure is :

Pay and allowances, cost of uniforms and contingencies. 70,000

So, in all for A Class fire service Station, the expenditure is Rs. 5,35,000.

For B type fire Station :

Cost of fire station building	...	Rs. 60,000
Equipment and appliances	...	80,000
Staff quarters	...	1,25,000
Total recurring expenditure	...	2,65,000

Recurring expenditure :

Pay and allowances, etc.	...	40,500

In all it comes to Rs. 3,05,500.

ಶ್ರೀ ಎಲ್. ಶ್ರೀಕಂಠಯ್ಯ.—ಇದರಲ್ಲಿ 'ಎ' ಕ್ಲಾಸ್ ಮತ್ತು 'ಬಿ' ಕ್ಲಾಸ್ ಎಂದು ಹೇಳಿದಿರಿ. ಮೂಡುಬಿದ್ರೆ ಟೌನ್‌ಗೆ 20 ಸಾವಿರ ಜನ ಪಾಪುಲೇಷನ್‌ಗೆ 'ಸಿ' ಕ್ಲಾಸ್ ಮಾಡಿ ಸ್ವಲ್ಪಮಟ್ಟಿಗೆ 10 ಸಾವಿರ ರೂಪಾಯಿಯಾಗಲೀ ಅಥವಾ 50 ಸಾವಿರ ರೂಪಾಯಿಯಾಗಲಿ ಏತಕ್ಕೆ ಖರ್ಚು ಮಾಡ ಬಾರದು ? ಮಂಗಳೂರು ಟೌನ್‌ಗೆ 22 ಮೈಲಿ ದೂರವಿರುವುದರಿಂದ ಈ ಊರನ್ನು 3ನೇ ಕ್ಲಾಸ್ ಮಾಡಿ ಏತಕ್ಕೆ ಅನುಕೂಲಮಾಡಬಾರದು ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದುದನ್ನು ವಿಚಾರ ಮಾಡಿದ್ದೇನೆ. ಇದು ದೊಡ್ಡ ದೊಡ್ಡ ಪಟ್ಟಣಗಳಿಗೆ ಸಾಧ್ಯವಾಗುತ್ತದೆ. ಸಣ್ಣ ಸಣ್ಣ ಪಟ್ಟಣಗಳಿಗಾಗಲಿ, ಟೌನ್‌ಗಳಿಗಾಗಲಿ, ದೊಡ್ಡ ದೊಡ್ಡ ಪಂಚಾಯಿತಿಗಳಿಗಾಗಲಿ ಇದು ಸಾಧ್ಯವಿಲ್ಲ. ಅದಕ್ಕೋಸ್ಕರ ಬೆಂಗಳೂರಿನಲ್ಲಿ ಲೋಕಲ್ ಫರ್ ಪೋರ್ಟಬಲ್ ಫೈರ್ ಫೈಟಿಂಗ್ ಪಂಪ್ಸ್‌ನ್ನು ತಯಾರು ಮಾಡಿದ್ದಾರೆ. ಅದು ಅಷ್ಟೊಂದು ಖರ್ಚಾಗುವುದಿಲ್ಲ. ಇದರಿಂದ ಅನುಕೂಲವಾಗುತ್ತದೆ. ಎಲ್ಲಾ ಡೆಪ್ಯೂಟೀ ಕಮಿಷನರುಗಳಿಗೂ ಬರೆದಿದ್ದೇವೆ. ಪಂಚಾಯಿತಿಯವರೂ ಮತ್ತು ಸಣ್ಣ ಸಣ್ಣ ಮುನಿಸಿಪಾಲಿಟಿಯವರು ಇದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿದ್ದರೆ ಅವರಿಗೆ ತೆಗೆದುಕೊಳ್ಳುವುದಕ್ಕೆ ಪರ್ಸೂ ಮಾಡಬೇಕು ಎಂದು ಹೇಳಿದ್ದೇವೆ. ಬಹುಶಃ ಪೋರ್ಟಬಲ್ ಫೈರ್ ಪಂಪ್ಸ್ ಬೇಕಾಗಿದ್ದರೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರೆ ಏನಾದರೂ ಮಾಡ ಬಹುದು.

Missing of Sugar Consignment

25. Sri L. SRIKANTAIAH (Nanjangud).—

Will the Chief Minister be pleased to state :—

(a) whether Messrs. Appakutty, wholesale Merchants, Big Bazar, Calicut, lodged a complaint with the police at Hospet on 28th